



ನಮ್ಮ ಸಂಸಾರ ಸುಖವಾಗಿ ಸಾಗಲು ಏನಾದರೂ ಟಿಪ್ಸ್ ಕೊಡಿ ಸ್ವಾಮೀಜಿ ಫೋನಿನಲ್ಲಿ ಜ್ಯೋತಿಷಿಗಳನ್ನು ಕೇಳಿದಳು ಗುಮ್ಮಿ.

ನಿನ್ನ ಗಂಡ ಸಾಗಿದ ಹಾದಿಯಲ್ಲೇ ದಿನಾಲೂ ಹೋಗು. ಸಂಸಾರದಲ್ಲಿ ಕಷ್ಟಗಳಿರಲ್ಲ ಎಂದರವರು.

ಅದು ಸಾಧ್ಯವಿಲ್ಲ ಸ್ವಾಮೀಜಿ ಎಂದಳು ನಗುತ್ತ.

ಸಾಧ್ಯ ಆಗುತ್ತೆ ಪ್ರಯತ್ನಿಸು. ಏನ್ಮಾಡ್ತಿದಾರೆ ನಿಮ್ಮ ಗಂಡ? ಕೇಳಿದರು.

ಪೋಸ್ಟ್ ಮನ್ ಸ್ವಾಮೀಜಿ.

***

ನಂಗೆ ತುಂಬ ಬೇಜಾರು ಆಗಿದೇರಿ ಗಂಡನ ತಲೆ ಸವರುತ್ತ ತಿಮ್ಮಿ ನುಡಿದಳು.

ಯಾಕೆ? ತಿಮ್ಮ ಪ್ರಶ್ನಿಸಿದ.

ಈಗ ಕೊರೊನಾ ಇರೋದಕ್ಕೆ ಮನೆ ಕೆಲಸದವಳು ಬರ್ತಿಲ್ವಲ್ಲ ಅದ್ಕೆ ಎಂದು ಉತ್ತರಿಸಿದಳು.

ಕೆಲಸ ಹೆಚ್ಚಿದ್ರೆ ಹೇಳು ನಾನು ಮನೇಲೇ ಇರ್‍ತೀನಲ್ಲ ಹೆಲ್ಪ್ ಮಾಡ್ತೀನಿ ಅಂದ ತಿಮ್ಮ.

ಹಾಗಲ್ಲಾರಿ, ಅವ್ಳು ಪಕ್ಕದ ಮನೆಯವರ ಸುದ್ದಿ ತಂದು ಹೇಳ್ತಿದ್ಲು. ನಿಧಾನಕ್ಕೆ ಉಸುರಿದಳು.

***

ಏನ್ರೀ, ಮಿನಿಸ್ಟ್ರು ತಮ್ಮ ಸ್ವಂತ ಹಣದಲ್ಲಿ ಜೈಲು ಕಟ್ಟಿಸ್ತಿದಾರಂತೆ ಕೊರೊನಾ ಸಂದರ್ಭದಲ್ಲಿ ಅದರ ಅವಶ್ಯಕತೆ ಏನಿತ್ತು? ಈತ ಪ್ರಶ್ನಿಸಿದ.

ಅಯ್ಯೋ, ಟರ್ಮ್ ಮುಗಿದ ಮೇಲೆ ಹೋಗಲಿಕ್ಕೆ ಒಳ್ಳೇ ಜೈಲು ಬೇಕಲ್ಲ.

***

ಇಲ್ಲಿ ಮಾಸ್ಕ್ ಧರಿಸಿಕೊಂಡು, ವ್ಯಕ್ತಿಗತ ಅಂತರ ಕಾಪಾಡಿಕೊಂಡು ಕೆಲಸ ಮಾಡಲಾಗುತ್ತದೆ ಎಂಬ ಬೋರ್ಡನ್ನು ದಿನಸಿ ಅಂಗಡಿಯ ಮುಂದೆ ತೂಗು ಬಿಡಲಾಗಿತ್ತು.

ಗ್ರಾಹಕನೊಬ್ಬ ಒಳಗೆ ಹೋದ. ನೋಡಿದರೆ ಮಾಸ್ಕೂ ಇಲ್ಲ, ಅಂತರವೂ ಇಲ್ಲ. ಗಾಬರಿಯಾಗಿ ಮಾಲೀಕರನ್ನು ಪ್ರಶ್ನಿಸಿದ.

ಓಹ್, ಅದಾ? ಕೊರೊನಾ ವೈರಸ್‌ಗೆ ಮೋಸ ಮಾಡಲು ಹಾಕಿದ್ದು ವಿವರಣೆ ನೀಡಿದರು ಮಾಲೀಕರು.

***

ಸ್ತ್ರೀ ಶಕ್ತಿ ಅಗಾಧವಾದುದು ಅಂತ ನನಗೆ ಗೊತ್ತೇ ಇರಲಿಲ್ಲ ಆತ ನುಡಿದ.

ಮತ್ತೆ ಈಗ ಗೊತ್ತಾಯ್ತಾ? ಈತ ಕೇಳಿದ.

ಮದುವೆಯಾದ ಮೇಲೆ ಗೊತ್ತಾಯ್ತು ಆತ ನಿಟ್ಟುಸಿರು ಬಿಟ್ಟ.

***

ಡಾಕ್ಟರ್: ಮಂತ್ರಿಗಳಿಗೆ ಕೋವಿಡ್ ಸೋಂಕಿದ್ದರೂ ಹೊರಗಡೆ ಅದರ ಲಕ್ಷಣಗಳೇ ಇಲ್ಲ.

ವರದಿಗಾರ: ಅದು ಹಾಗೇ ಸರ್. ಮಂತ್ರಿಗಳ ಮನೆಯಲ್ಲಿ ಕೋಟಿಗಟ್ಟಲೆ ಸಂಪತ್ತಿದ್ದರೂ ಜನರಿಗೆ ಅದರ ಸುಳಿವು ಗೊತ್ತಾಗೋದೇ ಇಲ್ವಲ್ಲ ಹಾಗೇ ಇದೂ.

***

ತಿಮ್ಮನ ಹೆಂಡತಿ ಕೂಸನ್ನೆತ್ತಿಕೊಂಡು ಬಾಗಿಲಿನಲ್ಲಿ ಮುದ್ದುಮಾಡುತ್ತಿದ್ದಳು. ಕಚೇರಿಯಿಂದ ಬಂದ ತಿಮ್ಮ ಮಗುವನ್ನು ಮುದ್ದುಮಾಡುತ್ತ ತಾನೇ ಕೈಗೆತ್ತಿಕೊಂಡ.

ನೋಡೇ, ಥೇಟ್ ನನ್ನ ಹಾಗೇ ಇದೆ. ನಂದೇ ಕಣ್ಣು, ನಂದೇ ಮೂಗು... ಎನ್ನುತ್ತ ಖುಷಿ ಪಡುತ್ತಿದ್ದ.

ಅಷ್ಟರಲ್ಲೇ ತಿಮ್ಮನ ಹೆಂಡತಿ ರೀ, ಇದು ಪಕ್ಕದ ಮನೆಯವಳ ಮಗು ಎಂದಳು ಆಶ್ಚರ್ಯದಿಂದ.

***

ಪತಿ: ಕೊರೊನಾದಿಂದ ನಮಗೆ ತುಂಬ ನೆರವಾಯ್ತು ಕಣೇ.

ಪತ್ನಿ: ಯಾಕ್ರೀ, ಹೇಗೆ ನೆರವಾಯ್ತು?

ಪತಿ: ಅಳಿಯಂದಿರು ಕೊರೊನಾ ಇರೋದ್ರಿಂದ ಮೈಸೂರಿಗೆ ದಸರಾಕ್ಕೆ ಬರಲ್ಲ ಅಂತ ಮೆಸೇಜ್ ಮಾಡಿದಾರೆ.

***

ನ್ಯಾಯಾಧೀಶರು: ಯಾಕಮ್ಮ ನಿನ್ನ ಗಂಡನಿಗೇಕೆ ಡೈವರ್ಸ್ ಕೊಡ್ತಿದೀಯಾ?

ಆಕೆ: ಸ್ವಾಮೀ... ನನ್ನ ಗಂಡ ಮಾಸ್ಕ್ ಹಾಕಿಕೊಳ್ಳದೇ ಊರಲ್ಲಿ ತಿರುಗಾಡ್ತಿದಾರೆ.

***

ಮಗ: ಅಪ್ಪಾಜೀ, ಇವತ್ತು ನಮ್ಮ ಟೀಚರ್ ನನಗೆ ಶಿಕ್ಷೆ ನೀಡಿದರು.

ತಂದೆ: ಯಾಕೆ?

ಮಗ: ಟೀಚರ್ ಕೋಲನ್ನು ನನ್ನ ಕಡೆ ಹಿಡಿದು ಈ ಕೋಲಿನ ತುದಿಗೆ ಮೂರ್ಖ ಇರೋದು ಅಂದ್ರು, ಆಗ ನಾನು ಯಾವ ತುದಿಗೆ ಅಂತ ಕೇಳಿದೆ ಅಷ್ಟೇ.

***

ಆತ: ಅಸ್ಥಿಪಂಜರಗಳು ತಮ್ಮ ರಜೆಯನ್ನು ಎಲ್ಲಿ ಕಳೆಯುತ್ತವೆ?

ಈತ: ಮೃತ ಸಮುದ್ರದಲ್ಲಿ..

***

ಯಜಮಾನ: ಏನಯ್ಯಾ, ಕೆಲಸ ಮಾಡದೇ ಸುಮ್ಮನೇ ಕುಳಿತಿದ್ದೀಯಲ್ಲ?

ನೌಕರ: ಕ್ಷಮಿಸಿ... ಯಜಮಾನರೇ ನೀವು ಬಂದಿದ್ದು ಗೊತ್ತಾಗಲಿಲ್ಲ!

(ಸಂಗ್ರಹ) ಪ್ರಕಾಶ ಎಸ್. ಮನ್ನಂಗಿ


